ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಎಷ್ಟು ಕೃಷಿ ಪಾಸ್ ಪುಸ್ತಕಗಳನ್ನು ಹಂಚಲಾಗಿದೆ;

ಆ.1992-93ರಲ್ಲಿ ರೈತರ ಏಳಿಗೆಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):-

ಅ. ಇಲ್ಲಿಯವರೆಗೆ ಹಂಚಲಾಗಿಲ್ಲ. 1993-94ನೇ ಸಾಲಿನಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ರಸಗೊಬ್ಬರಗಳನ್ನು ವಿತರಣೆ ಮಾಡುವ ಯೋಜನೆಯನ್ನು ರೂಪಿಸಿದ್ದು ಇದಕ್ಕೆ ನೆರವಾಗಲು ಈ ವರ್ಗದ ರೈತರಿಗೆ ಕೃಷಿ ಪಾಸ್ ಪುಸ್ತಕಗಳನ್ನು ನೀಡಲು ಯೋಜಿಸಲಾಗಿದೆ.

ಆ. ಅನಿಯಂತ್ರಣಗೊಳಿಸಿರುವ ರಂಜಕ, ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ವಿತರಣೆ ಮಾಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಲ್ಲಿ ಒಟ್ಟು 2.39 ಲಕ್ಷ ರಸಗೊಬ್ಬರಗಳನ್ನು ವಿತರಣೆ ಮಾಡಲಿದ್ದು ಇದಕ್ಕಾಗಿ 17.53 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಉಪಯೋಗಿಸಲಾಗುವುದು.

ಪರಿಶಿಷ್ಟಜಾತಿ-ಪಂಗಡಗಳವರಿಗೆ ಸ್ಮಶಾನಗಳಿಗಾಗಿ ಭೂಸ್ವಾಧೀನ

1101 (536): ಶ್ರೀ ಆಂಜನಮೂರ್ತಿ (ನೆಲಮಂಗಲ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಾಂಗಕ್ಕೆ ಸ್ಮಶಾನಗಳಿಲ್ಲದಿರುವುದು ಸರ್ಕಾರದವರಿಗೆ ಗೊತ್ತಿದೆಯೇ (ಸ್ಮಶಾನಗಳಿಲ್ಲದ ಗ್ರಾಮಗಳ ಪೂರ್ಣ ವಿವರಗಳನ್ನು ನೀಡುವುದು);

ಆ. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು;

ಇ. ಇದುವರೆವಿಗೂ ಈ ಉದ್ದೇಶಕ್ಕಾಗಿ ವಶಪಡಿಸಿಕೊಳ್ಳಲಾಗಿರುವ ಭೂ ವಿಸ್ತೀರ್ಣವೆಷ್ಟು;

ಈ. ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):-

ಅ. ಬಂದಿದೆ. ಸಧ್ಯಕ್ಕೆ ಸರ್ಕಾರದಲ್ಲಿ ಗ್ರಾಮಗಳ ಮಾಹಿತಿ ಲಭ್ಯವಿರುವುದಿಲ್ಲ.

ಆ. ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನರ ಸ್ಮಶಾನಕ್ಕಾಗಿ ಜಮೀನು ಭೂಸ್ವಾಧೀನ ಪಡಿಸಿಕೊಳ್ಳಲು ಸರ್ಕಾರ ಈಗಾಗಲೇ ಪತ್ರಗಳನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬರೆಯಲಾಗಿದೆ.

ಇ. 1. ಟಿ. ನರಸೀಪುರ ಗ್ರಾಮ ಮತ್ತು ತಾಲ್ಲೂಕು (ಮೈಸೂರು ಜಿಲ್ಲೆ)ಯಲ್ಲಿ ಸ.ನಂ. 21:1 2-00 ಎಕರೆ ಜಮೀನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರ ಸ್ಮಶಾನಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

2. ಅಲ್ಲದೆ ಕಾರವಾರ ಜಿಲ್ಲಾಧಿಕಾರಿಗಳಿಗೆ ಸ್ಮಶಾನದ ಸಲುವಾಗಿ ಭೂಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಸರ್ಕಾರ ನಾಲ್ಕು ಲಕ್ಷ ರೂಪಾಯಿ ಬಿಡುಗಡೆ ಮಾಡಿದೆ.

ಈ. ಉದ್ಭವಿಸುವುದಿಲ್ಲ.

ಹೇಮಾವತಿ ನಾಲೆಯಿಂದ ಕುಡಿಯುವ ನೀರಿನ ಯೋಜನೆ.

1102 (1756): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ತುರುವೇಕೆರೆಗೆ ಹೇಮಾವತಿ ನಾಲೆಯಿಂದ ಕುಡಿಯುವ ನೀರಿನ ಯೋಜನೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ? ಹಾಗೂ ಅದಕ್ಕಾಗಿ ಮಂಜೂರಾಗಿರುವ ಹಣವೆಷ್ಟು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

1. ಇಲ್ಲಾ.

2. ಉದ್ಭವಿಸುವುದಿಲ್ಲ.

ಅಧ್ಯಕ್ಷರು:– ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಕಾಲರಾ ರೋಗದಿಂದ ಉದ್ಭವಿಸಿರುವ ಪರಿಸ್ಥಿತಿ

† ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ):– ಮಾನ್ಯ ಅಧ್ಯಕ್ಷರೇ, ಮೈಸೂರು ನಗರ ಈ ದಶಕದಲ್ಲೇ ಕಂಡಿರದಂತಹ ಅತ್ಯಂತ ಭೀಕರ ಕಾಲರಾ ಬೇನೆಯಿಂದ ತತ್ತರಿಸಿ ಹೋಗಿದೆ. ನಮ್ಮ ಜಿಲ್ಲೆಯ ಮಂತ್ರಿಗಳಾದ ರಾಜಶೇಖರಮೂರ್ತಿಯವರು ಮತ್ತು ಹಿರಿಯರಾದ ರಾಮಸ್ವಾಮಿಯವರ ಹತ್ತಿರ ಕೂಡ ನಾನು ಪ್ರಾರ್ಥನೆ ಮಾಡಿದ್ದೇನೆ ಸನ್ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೂಡ ಕೇಳಿದ್ದೇನೆ. ಈಗಾಗಲೇ ಜನವರಿ ತಿಂಗಳಿನಿಂದ ನಿನ್ನೆಯ ತನಕ ಸುಮಾರು 41 ಜನ ಕಾಲರಾ ಬೇನೆಗೆ ತುತ್ತಾಗಿ ನಿಧನರಾಗಿದ್ದಾರೆ. ಸೋಂಕು ರೋಗದ ಆಸ್ಪತ್ರೆಯ ಅಧ್ಯಕ್ಷ ಕೂಡ ನಾನು. ಮೈಸೂರು ನಗರದ ಇತಿಹಾಸದಲ್ಲೇ ಇಷ್ಟೊಂದು ಕಾಲರಾ ಬೇನೆಯಿಂದ ಸತ್ತಿರುವುದು ಈ ದಶಕದಲ್ಲಿ ಇದು ಅತ್ಯಂತ, ಕೇಳರಿಯದಂತಹ ದುರಾದೃಷ್ಟಕರವಾದಂತಹ ವಿಷಯ. ಇವತ್ತು ರಾತ್ರಿ ನಾನು ಟೆಲಿಫೋನ್ ಮುಖಾಂತರ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿದೆ. ಇವತ್ತು ಮೈಸೂರು ನಗರಕ್ಕೆ ನಮ್ಮ ಮಂತ್ರಿಗಳನ್ನು ಕಳುಹಿಸಿಕೊಡಿ ಆರೋಗ್ಯ ಮಂತ್ರಿಗಳನ್ನು ಕಳುಹಿಸಿಕೊಡಿ ಎಂದು. ಅಲ್ಲಿ ಡಾಕ್ಟರ್ಸ್ ಇಲ್ಲ, ಅಲ್ಲಿ ನರ್ಸಗಳು ಇಲ್ಲ; ಸುಮಾರು 30 ಜನ ರೋಗಿಗಳಿಗೆ ಅವಕಾಶ ಇರುವಂತಹ ಒಂದು ಆಸ್ಪತ್ರೆಯಲ್ಲಿ ಇವತ್ತು 300 ಜನ ರೋಗಿಗಳು ದಾಖಲಾಗಿದ್ದಾರೆ. ಕೆ. ಆರ್. ಆಸ್ಪತ್ರೆಯಲ್ಲಿ ನಾವು ಡಾಕ್ಟರ್ಸನ್ನು ಕೇಳಿದ್ದೇವೆ. ನಗರ ಪಾಲಿಕೆಯಿಂದ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿದ್ದೇವೆ. ನಮ್ಮ ಡಿ.ಎಚ್.ಓ. ಹತ್ತಿರ ಕೇಳಿದ್ದೇವೆ. ಆದರೂ ಕೂಡ ನಿನ್ನೆಯ ತನಕ ಯಾವ ಕಾರ್ಯ ಕೂಡ ಸರಿಯಾಗಿ ಆಗಿಲ್ಲ. ಸುದೈವ ಜಿಲ್ಲಾಧಿಕಾರಿಗಳು 3 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ ನಿನ್ನೆ ಸಂಜೆ 7 ಗಂಟೆಯಲ್ಲಿಯೂ ಕೂಡ ಒಬ್ಬ ವ್ಯಕ್ತಿ ಮರಣ ಹೊಂದಿದ. ನಾನು ಆಗ ತಾನೇ ಟೆಲಿಫೋನ್ ಮೂಲಕ